

ಗುಂಡ: ಏನೇ ಊರಿಂದ ಮಗ ಬಂದಿರೋ ಹಾಗಿದೆ?

ಹೆಂಡತಿ: ಹೌದೂರೀ ಬಂದಿದ್ದಾನೆ. ನಿಮಗೆ ಹೇಗೆ ಗೊತ್ತಾಯಿತು?

ಗುಂಡ: ನನ್ನ ಷರಟಿನ ಜೇಬಲ್ಲಿ ಎರಡು ಸಿಗರೇಟು ಇಟ್ಟಿದ್ದೆ. ಈಗ ಒಂದಿದೆ.

★★★

ಗೆಳೆಯ: ಇಂಗ್ಲೆಂಡ್ ದೇಶದವರಿಗೆ ತುಂಬಾ ಕನ್‌ಫ್ಯೂಸ್ ಆಗುವ ದಿನ ಯಾವುದು ಗೊತ್ತಾ?

ಗುಂಡ: ಗೊತ್ತು, ಫಾದರ್ಸ್ ಡೇ.

★★★

ಹೆಂಡತಿ: ರೀ ನಿಮಗೆ ಗೊತ್ತಾ: ಮದುವೆ ಅನ್ನೋದು ಒಂದು ಲಾಟರಿ ಟಿಕೆಟ್ ಇದ್ದ ಹಾಗೆ.

ಗುಂಡ: ತಪ್ಪು ತಪ್ಪು! ಲಾಟರಿ ಟಿಕೆಟ್‌ಗೆ ಬಹುಮಾನ ಬರದಿದ್ದರೆ ಅದನ್ನು ಹರಿದು ಹಾಕಬಹುದು. ಆದರೆ...

★★★

ಹೆಂಡತಿ: ರೀ ಪಕ್ಕದ ಮನೆಗೆ ಹೊಸದಾಗಿ ಬಂದಿರೋ ಗಂಡ– ಹೆಂಡತಿ ಸರಸ ಆಡೋದು ನಮ್ಮ ಕಿಟಕಿಯಿಂದ ಕಾಣುತ್ತೆ ರೀ! ಅಸಹ್ಯ.

ಗುಂಡ: ಏನೇ ನೀನು ಹೇಳ್ತಾ ಇರೋದು? ಪಕ್ಕದ ಮನೆ ಕಿಟಕಿಯಿಂದಾನಾ? ಆ ಮನೆ ತುಂಬಾ ದೂರ ಇದೆಯಲ್ಲ. ನನಗೆ ಕಾಣ್ತಾ ಇಲ್ಲ.

ಹೆಂಡತಿ: ಈ ದುರ್ಬೀನಿನಲ್ಲಿ ನೋಡಿ.

★★★

ಹೆಂಡತಿ: ರೀ ಪಕ್ಕದ ಮನೆಯಾತ ಬಂದಿದ್ರು.

ಗುಂಡ: ಯಾಕಂತೆ?

ಹೆಂಡತಿ: ಅವರ ಹೆಂಡತಿಯ ತಿಥಿಯಂತೆ! ಕರೆಯೋಕೆ ಬಂದಿದ್ರು.

ಗುಂಡ: ನಾನು ಹೋಗೋಲ್ಲ.

ಹೆಂಡತಿ: ಯಾಕ್ರೀ ಹೋಗೋಲ್ಲ?

ಗುಂಡ: ಅವರು ಮೂರು ಬಾರಿ ಕರೆದಿದ್ದಾರೆ. ನಾನು ಒಂದೇ ಒಂದು ಸಲವೂ ಕರೆದಿಲ್ಲವಲ್ಲ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಗಂಡ: ಏನೇ ಇದು? ಸಾಂಬಾರಿಗೆ ಖಾರ ಜಾಸ್ತಿಯಾಗಿದೆ, ಪಲ್ಯಕ್ಕೆ ಉಪ್ಪು ತುಂಬ ಜಾಸ್ತಿಯಾಗಿದೆ.

ಹೆಂಡತಿ: ನಿಮ್ಮ ಮನೆ ಕಡೆಯ ನೆಂಟರು ಊಟಕ್ಕೆ ಬರ್ತಾರೆ ಅಂತ ಹೇಳಿದ್ರಲ್ಲಾ– ಅವರು ಬರದೇ ಇದ್ರೆ ಅದು ನನ್ನ ತಪ್ಪಾ?

★★★

ಮರಿ ಸಾಹಿತಿ: ನಾನು ನೆರೆಮನೆಯವರ ಜೊತೆ ಚೆನ್ನಾಗಿರೋಣ ಅಂತ ನಾನು ಬರೆದ ಪುಸ್ತಕ ಕೊಟ್ಟು ಸ್ನೇಹ ಗಳಿಸಲು ಪ್ರಯತ್ನ ಮಾಡಿದೆ. ಆದರೆ ಅಂದಿನಿಂದ ನೆರೆ ಹೊರೆಯವರೆಲ್ಲ ನನ್ನ ಜೊತೆ ಮಾತಾಡ್ತಾ ಇಲ್ಲ. ನನ್ನನ್ನು ಕಂಡು ಮನೆ ಬಾಗಿಲು ಹಾಕೋತಿದಾರೆ ಕಣಯ್ಯ!

ಗೆಳೆಯ: ನೀನು ಬರೆದ ಯಾವ ಪುಸ್ತಕವನ್ನು ಅವರಿಗೆ ಕೊಟ್ಟೆ?

ಮರಿ ಸಾಹಿತಿ: 'ನಿಮ್ಮ ನೆರೆಯ ಮನೆಯವರ ಬಗ್ಗೆ ಎಚ್ಚರವಾಗಿರಿ' ಎಂಬ ಪುಸ್ತಕ ಕಣಯ್ಯ!

**(ಸಂಗ್ರಹ) ಗೀತಾ ಶಾಸ್ತ್ರಿ, ಬೆಂಗಳೂರು**




ವರನ ತಂದೆ: ನನ್ನ ಮಗ ಹೇಳಿದ್ದನ್ನು ತಪ್ಪದೇ ಪಾಲಿಸುವಂಥವನು

ವಧು ತಂದೆ: ಒಳ್ಳೆಯದೇ ಆಯಿತು ಬಿಡಿ, ನಮ್ಮ ಹುಡುಗಿ ಆಜ್ಞೆ ಮಾಡುವುದರಲ್ಲಿ ಎತ್ತಿದ ಕೈ!

★★★

ಪತ್ನಿ: ರೀ, ನಾನು ಎಲ್ಲರ ಕೈಯಲ್ಲೂ ಸುಂದರಿ ಎನ್ನಿಸಿಕೊಳ್ಳಬೇಕು ಕಣ್ರಿ.

ಪತಿ: ಇಷ್ಟೆಲ್ಲ ಕಷ್ಟ ಏಕೆ? ನಿನ್ನ ಹೆಸರನ್ನೇ ಸುಂದರಿ ಅಂತ ಇಟ್ಟುಕೊಂಡು ಬಿಡೆ!

★★★

ಮಗಳು: ಅಮ್ಮ, ನಿನ್ನ ತಲೆ ಕೂದಲು ಕೆಲವು ಬೆಳ್ಳಗಾಗಿವೆ.

ತಾಯಿ: ಹೌದಮ್ಮ, ನೀನು ನನಗೆ ಸುಳ್ಳು ಹೇಳಿದಾಗಲೆಲ್ಲ ಒಂದೊಂದೇ ಕೂದಲು ಬೆಳ್ಳಗಾಗುತ್ತಿವೆ.

ಮಗಳು: ಅಮ್ಮ, ಹಾಗಾದರೆ ಅಜ್ಜಿ ತಲೆ ಕೂದಲೆಲ್ಲ ಏಕೆ ಪೂರಾ ಬೆಳ್ಳಗಾಗಿದೆ!

★★★

ಕೆಲಸದಾಕೆ: ಅಮ್ಮ ನಾಳೆಯಿಂದ ನಿಮ್ಮ ಮನೆ ಕೆಲಸಕ್ಕೆ ಬರೋದಿಲ್ಲ.

ಮನೆಯಾಕೆ: ಏಕಮ್ಮಾ, ಏನಾಯ್ತು?

ಕೆಲಸದಾಕೆ: ಇನ್ನೇನಮ್ಮಾ, ನಿಮ್ಮ ಯಜಮಾನರು ಒಂದು ವಾರದಿಂದ ಕಣ್ಣೆತ್ತಿ ಕೂಡಾ ನೋಡ್ತಾ ಇಲ್ಲ!

**(ಸಂಗ್ರಹ) ಶಂಕರೇಗೌಡ ತುಂಬಕೆರೆ, ಮಂಡ್ಯ**